**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂ.ಪಿಐಓ/ಆರ್‌ಟಿಐ/ಸಿ.ಆರ್-153/11-12

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ: 24-11-2014.
ದೂರವಾಣಿ ಸಂಖ್ಯೆ:22208511.

**ಅಧಿಸೂಚನೆ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005 – ಹೊಸದಾಗಿ ಸೃಜಿಸಲಾಗಿರುವ ಕಛೇರಿಗಳಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಕಾತಿ ಹಾಗೂ ದಿನಾಂಕ 05-09-2013 ಅಧಿಸೂಚನೆಯ ತಿದ್ದುಪಡಿ ಮಾಡುವ ಕುರಿತು.

ಉಲ್ಲೇಖ:
1. ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ.ಕ.ಮಾ.ಆ.6405 ದೂರು 2010 ದಿನಾಂಕ : 25-01-2011.
2. ವಾಣಿಜ್ಯ ತೆರಿಗೆಗಳ ಆಯುಕ್ತರ ಅಧಿಸೂಚನೆ ಸಂ.ಪಿಐಓ/ ಆರ್‌ಟಿಐ/ಸಿ.ಆರ್-153/11-12 ದಿನಾಂಕ: 12-12-2011, 26-03-2012 ಮತ್ತು 05-09-2013.
3. ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಸಿಬ್ಬಂದಿ.3ಜಿ/ ಸಿ.ಆರ್-10/13-14 ದಿನಾಂಕ: 16-09-2013.
4. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ 15 ವಾತೆಸಿ 2014 ಬೆಂಗಳೂರು ದಿನಾಂಕ: 09-01-2014.
5. ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಸಆ(ಸಿ-1). 2ಬಿ.ಸಿಆರ್.125/13-14 ದಿನಾಂಕ: 15-11-2014.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2)ರ ಅಧಿಸೂಚನೆ ದಿನಾಂಕ 05-09-2013ರಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005ರಡಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ವಿವಿಧ ವೃಂದದ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು.

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಉಲ್ಲೇಖ (3)ರನ್ವಯ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಸಿಬ್ಬಂದಿ-1, ಉಲ್ಲೇಖ (4)ರನ್ವಯ Economic Intelligence Unit & Electronic Audit Unit ಕಛೇರಿಗಳು ಮತ್ತು ಉಲ್ಲೇಖ (5)ರನ್ವಯ ವಾಣಿಜ್ಯ ತೆರಿಗೆ ಉಪ ಆಯುಕ್ತರು, ಸಿಬ್ಬಂದಿ-3 ಕಛೇರಿಗಳನ್ನು ಹೊಸದಾಗಿ ಸೃಜಿಸಲಾಗಿರುತ್ತದೆ. ಸದರಿ ಕಛೇರಿಗಳಿಗೆ ಹಾಗೂ ವಾಣಿಜ್ಯ ತೆರಿಗೆ ಉಪ ಆಯುಕ್ತರು (ಜಾಗೃತಿ) ಕಛೇರಿಗೆ ಮಾಹಿತಿ ಹಕ್ಕು ಅಧಿನಿಯಮ, 2005ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರವನ್ನು ನೇಮಕ ಮಾಡುವ ಅವಶ್ಯಕತೆಯಿರುತ್ತದೆ.

..2..

ಮುಂದುವರೆದು, ದಿನಾಂಕ 05-09-2013ರ ಅಧಿಸೂಚನೆಯಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಮೈಸೂರು, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಬೆಳಗಾವಿ ಕಛೇರಿಗಳ ಮೇಲ್ಮನವಿ ಪ್ರಾಧಿಕಾರ ನೇಮಕಾತಿಯನ್ನು ಹಾಗೂ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಮಂಗಳೂರು ಕಛೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ನೇಮಕಾತಿಯನ್ನು ತಿದ್ದುಪಡಿ ಮಾಡುವ ಅವಶ್ಯಕತೆಯಿರುತ್ತದೆ.

ಆದುದರಿಂದ ಹೊಸದಾಗಿ ಸೃಜಿಸಲಾಗಿರುವ ಕಛೇರಿಗಳಿಗೆ ಮತ್ತು ದಿನಾಂಕ 05-09-2013 ಅಧಿಸೂಚನೆಯಲ್ಲಿ ಮೇಲ್ಕಂಡ ಕಛೇರಿಗಳ ಸಾರ್ವಜನಿಕ ಮಾಹಿತಿ ಅಧಿಕಾರಿ/ಮೇಲ್ಮನವಿ ಪ್ರಾಧಿಕಾರವನ್ನು ನೇಮಕಾತಿ/ತಿದ್ದುಪಡಿ ಮಾಡಿ ಕೆಳಕಂಡಂತೆ ಆದೇಶಿಸಲಾಗಿದೆ.

1. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 184 ಸಮಯ/2005, ದಿನಾಂಕ: 22-09-2005ರ ಪ್ರಕಾರ ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿತವಾದ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯು ಮಾಹಿತಿ ಹಕ್ಕು ಅಧಿನಿಯಮ, 2005ರ ಕೇಂದ್ರ ಕಾಯ್ದೆ ಸಂಖ್ಯೆ.22ರ ಪ್ರಕರಣ 5(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅನುಬಂಧದ ಕಲಂ (2)ರಲ್ಲಿ ಕಾಣಿಸಿದ ಕಛೇರಿ ಕಾರ್ಯವ್ಯಾಪ್ತಿಗೆ ಅನ್ವಯಿಸುವಂತೆ ಕಲಂ (3)ರಲ್ಲಿನ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಎಂದು ನೇಮಕಾತಿ/ತಿದ್ದುಪಡಿ ಮಾಡಲಾಗಿದೆ.

2. ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 19(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನುಚಲಾಯಿಸಿ ಅನುಬಂಧದಲ್ಲಿನ ಕಲಂ (4)ರಲ್ಲಿ ನಮೂದಿಸಿದ ಅಧಿಕಾರಿಗಳನ್ನು ಕಲಂ (3)ರಲ್ಲಿ ಕಾಣಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಆದೇಶಗಳ ಮೇಲೆ ಕಾಯ್ದೆಯಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕಾತಿ/ತಿದ್ದುಪಡಿ ಮಾಡಲಾಗಿದೆ.

ಈ ಆದೇಶವು ದಿನಾಂಕ:24-11-2014 ರಿಂದ ಜಾರಿಗೆ ಬಂದಿದ್ದು ಮುಂದಿನ ಆದೇಶದ ವರೆಗೆ ಜಾರಿಯಲ್ಲಿರುತ್ತದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ಪ್ರತಿಗಳು

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಜ್ಞಾನಭಾರತಿ ಕೆಂಗೇರಿ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಿ ಪ್ರಕಟಿಸಿದ ನಂತರ ಆಯುಕ್ತರ ಕಛೇರಿಯ ಅಧಿಕಾರಿಗಳಿಗೆ ಸರಬರಾಜು ಮಾಡಲು 10 ಪ್ರತಿಗಳನ್ನು ಒದಗಿಸಬೇಕೆಂದು ಕೋರಲಾಗಿದೆ.
2. ಸಂಬಂಧಿಸಿದ ಕಛೇರಿಗಳ ಅಧಿಕಾರಿಗಳಿಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು (ಮುಖ್ಯ ಪತ್ರದ ಮೂಲಕ)
4. ಕಛೇರಿ ಪ್ರತಿ.
5. ಹೆಚ್ಚುವರಿ ಪ್ರತಿ.
6. ರಕ್ಷಾ ಕಡತ.